**ಎಫ್ ಡಿ ಪಿ 28/2024 ಆರ್ ಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 18.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀಮತಿ ಎಲ್ ವಿ ವಕೀಲರಿಂದಃ**

ಕೇಸು ಹಾಕಿದ ವಿಷಯ ಮತ್ತು ಡಿಕ್ರಿಯಾದ ವಿಷಯವನ್ನು ನಮ್ಮ ಅಕ್ಕನ ಮಗನಾದ ನಂದ ಎಂಬಾತ ಹೇಳಿದ. ಹಾಗೆಯೇ ನನ್ನ ಮಗನಾದ ರಾಮಕೃಷ್ಣ ಸಹ ಹೇಳಿದ. ನನಗೆ ಈಗ 80 ವರ್ಷ ವಯಸ್ಸು. ಈ ಕುಟುಂಬದ ಆಸ್ತಿಗಳು ಇದ್ದವು ಎಂಬ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೀಡಿಲ್ಲ. ಜಿ.ಸಿದ್ದೇಗೌಡರಿಗೆ ಆಸ್ತಿಗಳು ಯಾರಿಂದ ಮತ್ತು ಹೇಗೆ ಬಂದವು ಎಂಬ ಬಗ್ಗೆ ದಾಖಲೆಗಳನ್ನು ನೀಡಿಲ್ಲ. ಜಿ.ಸಿದ್ದೇಗೌಡರ ವಂಶವೃಕ್ಷವನ್ನು ನೀಡಿಲ್ಲ. ಗವೀಗೌಡರಿಗೆ ಮನೆಯೊಂದೇ ಇದ್ದದ್ದು ಎಂದರೆ 3 ಎಕರೆ ಗದ್ದೆಯೂ ಸಹ ಇತ್ತು. ಗವೀಗೌಡರಿಗೆ ಪಿತ್ರಾರ್ಜಿತ ಅಥವಾ ಸ್ವಯಾರ್ಜಿತ ಆಸ್ತಿಗಳು ಯಾವುವು ಇರಲಿಲ್ಲ ಎಂದರೆ ಪಿತ್ರಾರ್ಜಿತ ಆಸ್ತಿಗಳು ಇದ್ದವು. ಗವೀಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಹಾಗೆಯೇ ಅವರ ತಾತ ಮುತ್ತಾತಂದಿರ ಹೆಸರು ಸಹ ನನಗೆ ಗೊತ್ತಿಲ್ಲ. ಗವೀಗೌಡರ ಹೆಸರಿನಲ್ಲಿ ಆಸ್ತಿ ಇದ್ದ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದೇನೆ. ಈ ಕೇಸು ಅಲ್ಲದೆ ಭಾಗಾಂಶ ಕೋರಿ ಬೇರೆ ಕೇಸು ಹಾಕಿಲ್ಲ. ವಂಶವೃಕ್ಷವನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದು ಹಾಜರುಪಡಿಸಿಲ್ಲ. ಈ ಆಸ್ತಿಗಳೆಲ್ಲಾ ಸಿದ್ದೇಗೌಡರಿಗೆ ಗೇಣಿ ಮೂಲಕ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಗವೀಗೌಡರ ತಾಯಿಯ ಕಡೆಯಿಂದ ಸಿದ್ದೇಗೌಡರಿಗೆ ಬಂದಂತಹ ಕೆಲವು ಆಸ್ತಿಗಳು ಮಾತ್ರ ಇವರ ಬಳಿ ಇವೆ ಎಂದರೆ ಸರಿಯಲ್ಲ. ಈಗಿನ ಕಾನೂನಿನ ಪ್ರಕಾರ ನನಗೆ ಈ ಆಸ್ತಿಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲದೆ ಇದ್ದರೂ ಸಹ ಎದುರುದಾರರಾದ ಜಯಲಕ್ಷ್ಮಿ ಮತ್ತು ಜೀವನ್ ಕುಮಾರ್ ರವರು ನನ್ನನ್ನು ಎತ್ತಿಕಟ್ಟಿ ಈ ಅರ್ಜಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಸಿದ್ದೇಗೌಡರ ಸ್ವಯಾರ್ಜಿತ ಆಸ್ತಿಗಳಿಗೆ ಸಂಬಂಧಿಸಿದಂತೆ ಕೇಸು ಹಾಕಿಕೊಂಡಿದ್ದಾರೆಯೇ ಹೊರತು ನನಗೆ ಈ ಆಸ್ತಿಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಗವೀಗೌಡರ ಹೆಸರಿನಲ್ಲಿ ಇದ್ದ

ಆಸ್ತಿಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇರುವ ಕಾರಣ ನನಗೆ ಈ ಆಸ್ತಿಗಳಲ್ಲಿ ನನಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು 4 ವರ್ಷದ ಮಗುವಿದ್ದಾಗ ಗವೀಗೌಡರು ತೀರಿಕೊಂಡರು. ಗವೀಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಅವರಗಳೆಂದರೆ ಸಿದ್ದೇಗೌಡ, ನಾರಾಯಣಗೌಡ, ನಾನು ಮತ್ತು ಬೋರಮ್ಮ ನಾರಾಯಣಗೌಡರಿಗೆ ಮದುವೆಯಾಗಿರಲಿಲ್ಲ. ಬೋರಮ್ಮನನ್ನು ಪಟ್ಟಸೋಮನಹಳ್ಳಿಗೆ ಮದುವೆ ಮಾಡಿತ್ತು. ಅವರಿಗೆ 3 ಜನ ಮಕ್ಕಳು. ನಾನು ವಂಶವೃಕ್ಷದಲ್ಲಿ ಹೆಸರಿಸಿರುವ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದೇನೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**